ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ 01 ಸಿಡಿಸಿ (2) 2018-19 / 1132

ನಿರ್ದೇಶಕರ ಕಛೇರಿ
ಅರಮನೆ ರಸ್ತೆ
ಬೆಂಗಳೂರು 560 001
ದಿ: 06-07-2018

**-:ಸುತ್ತೋಲೆ:-**

ವಿಷಯ: ಸಿಬ್ಬಂದಿ ವರ್ಗದವರು ಅಲ್ಪಾವಧಿ ತರಬೇತಿಗಳಿಗೆ, ಸಮಾವೇಶಗಳಿಗೆ, ಕಾರ್ಯಾಗಾರಗಳಿಗೆ ಹಾಗೂ Paper Presentationಗೆ ಹಾಜರಾಗಲು ನಿರ್ದೇಶನಾಲಯದಿಂದ ಅನುಮತಿಯ ಪತ್ರ ಪಡೆಯುವ ಬಗ್ಗೆ.

ಉಲ್ಲೇಖ: 1. ನಿರ್ದೇಶನಾಲಯದ ಸುತ್ತೋಲೆ ಪತ್ರ ಸಂ:ಡಿಟಿಇ/27/ಸಿಡಿಸಿ/2008-09, ದಿ:28.11.2008.
2. ನಿರ್ದೇಶನಾಲಯದ ಸುತ್ತೋಲೆ ಪತ್ರ ಸಂ:ಡಿಟಿಇ/27/ಸಿಡಿಸಿ/2008-09, ದಿ:16.04.2009.
3. ನಿರ್ದೇಶನಾಲಯದ ಸುತ್ತೋಲೆ ಪತ್ರ ಸಂ:ಡಿಟಿಇ/01/ಸಿಡಿಸಿ(2)/2015-16, ದಿ:16.03.2016.

*****

ಉಲ್ಲೇಖಿತ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಸುತ್ತೋಲೆಗಳಲ್ಲಿ ಈಗಾಗಲೇ ತಿಳಿಸಿದ್ದರೂ ಸಹ, ರಾಜ್ಯದ ಪಾಲಿಟೆಕ್ನಿಕ್‌ಗಳ ಹಾಗೂ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜು ಪ್ರಾಚಾರ್ಯರುಗಳು ಸಿಬ್ಬಂದಿ ವರ್ಗದವರನ್ನು ನಿರ್ದೇಶನಾಲಯದ ನಿಯೋಜನಾ ಪತ್ರವಿಲ್ಲದೆ ಎನ್‌ಐಟಿಟಿಟಿಆರ್, ಚೆನ್ನೈ ಹೊರತು ಪಡಿಸಿ ಇತರೆ ಎನ್‌ಐಟಿಟಿಟಿಆರ್ ಕೇಂದ್ರಗಳಲ್ಲಿ ಮತ್ತು ಇತರೆ ವಿದ್ಯಾ/ತರಬೇತಿ ಸಂಸ್ಥೆಯವರು ನಡೆಸುವ ಐಎಸ್‌ಟಿಇ, ಎಂಹೆಚ್‌ಆರ್‌ಡಿ, ಸಿಸಿಟೆಕ್, ಟೆಕ್ವಿಪ್ ಆಯೋಜಿತ ಅಲ್ಪಾವಧಿ ತರಬೇತಿಗಳಿಗೆ, ಸಮಾವೇಶಗಳಿಗೆ, ಕಾರ್ಯಾಗಾರಗಳಿಗೆ ಹಾಗೂ Paper Presentationಗೆ ನೇರವಾಗಿ ಸಂಸ್ಥೆಯ ಪ್ರಾಚಾರ್ಯರ ಹಂತದಲ್ಲಿ ನಿಯೋಜಿಸುತ್ತಿರುವುದು ನಿರ್ದೇಶನಾಲಯದ ಗಮನಕ್ಕೆ ಬಂದಿರುತ್ತದೆ.

ತತ್ಸಂಬಂಧ, ಉಲ್ಲೇಖಿತ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಸುತ್ತೋಲೆಗಳಲ್ಲಿ ಸೂಚಿಸಿರುವಂತೆ ಎನ್‌ಐಟಿಟಿಟಿಆರ್, ಚೆನ್ನೈ ಹೊರತು ಪಡಿಸಿ ಇತರೆ ಎನ್‌ಐಟಿಟಿಟಿಆರ್ ಕೇಂದ್ರಗಳಲ್ಲಿ ಮತ್ತು ಇತರೆ ವಿದ್ಯಾ/ತರಬೇತಿ ಸಂಸ್ಥೆಯವರು ನಡೆಸುವ ಐಎಸ್‌ಟಿಇ, ಎಂಹೆಚ್‌ಆರ್‌ಡಿ, ಸಿಸಿಟೆಕ್, ಟೆಕ್ವಿಪ್ ಆಯೋಜಿತ ಅಲ್ಪಾವಧಿ ತರಬೇತಿಗಳಿಗೆ, ಸಮಾವೇಶಗಳಿಗೆ, ಕಾರ್ಯಾಗಾರಗಳಿಗೆ ಹಾಗೂ Paper Presentationಗೆ ಆಯ್ಕೆಗೊಳ್ಳುವ ಸಲುವಾಗಿ ಸಿಬ್ಬಂದಿ ವರ್ಗದವರು ಸಂಸ್ಥೆಗಳ ಪ್ರಾಚಾರ್ಯರುಗಳ ಹಂತದಲ್ಲಿಯೇ ಅರ್ಜಿಗಳನ್ನು ಸಲ್ಲಿಸಬೇಕಾಗಿರುತ್ತದೆ. ಅಲ್ಪಾವಧಿ ತರಬೇತಿಗಳಿಗೆ, ಸಮಾವೇಶಗಳಿಗೆ ಹಾಗೂ Paper Presentationಗೆ ಆಯ್ಕೆಗೊಂಡ ಅವಧಿಯಲ್ಲಿನ ತರಗತಿಗಳಿಗೆ ವಿಭಾಗದ ಇತರೆ ಸಿಬ್ಬಂದಿ ವರ್ಗದವರಿಂದ ಬದಲಿ ವ್ಯವಸ್ಥೆ ಮಾಡಿಸಿ ಹಾಗೂ ಹಿಂತಿರುಗಿದ ನಂತರ ವಿಶೇಷ ತರಗತಿಗಳನ್ನು ತೆಗೆದುಕೊಳ್ಳುವ ನಿಬಂಧನೆಗಳಿಗೊಳಪಡಿಸಿ, ಒಬ್ಬರಿಗೆ ಪ್ರತಿ ಸೆಮಿಸ್ಟರ್‌ನಲ್ಲಿ ಒಂದು ತರಬೇತಿಗೆ ಮಾತ್ರ ಹಾಜರಾಗುವಂತೆ ಗಮನಹರಿಸಿ, ಸೂಕ್ತ ಶಿಫಾರಸ್ಸಿನೊಂದಿಗೆ (ಆಯ್ಕೆ ಪ್ರತಿ ಲಗತ್ತಿಸಿ) ಸಂಸ್ಥೆಗಳ ಪ್ರಾಚಾರ್ಯರುಗಳು ನಿರ್ದೇಶನಾಲಯಕ್ಕೆ ಪತ್ರ ಬರೆಯಲು ಹಾಗೂ ಇಲಾಖೆ/ಸರ್ಕಾರದಿಂದ ತರಬೇತಿಗೆ ಹಾಜರಾಗಲು ಕಡ್ಡಾಯವಾಗಿ ಅನುಮತಿಯನ್ನು ಪಡೆದ ನಂತರ ಸದರಿ ಸಿಬ್ಬಂದಿ ವರ್ಗದವರನ್ನು ಸಂಬಂಧಪಟ್ಟ ಪ್ರೋಗ್ರಾಂಗಳಿಗೆ ಸಂಸ್ಥೆಯಿಂದ ಬಿಡುಗಡೆಗೊಳಿಸಲು ಸೂಚಿಸಲಾಗಿದೆ.

ಮುಂದುವರೆದು, ಸಿಸಿಟೆಕ್ ಉಪ ಘಟಕಗಳ ಸಹಯೋಗದಲ್ಲಿ ನಡೆಯುವ ಅಲ್ಪಾವಧಿ ತರಬೇತಿಗಳಿಗೆ ಎರಡು ವಾರ ಮುಂಚಿತವಾಗಿ ನಿರ್ದೇಶನಾಲಯದಿಂದ ಕಡ್ಡಾಯವಾಗಿ ಅನುಮೋದನೆ ಪಡೆಯಬೇಕು. ಸಿಸಿಟೆಕ್ ಉಪ ಘಟಕಗಳ ಪ್ರಾಚಾರ್ಯರು, ತರಬೇತಿಗೆ ಹಾಜರಾಗಲು ಇಚ್ಛಿಸುವ ಸಿಬ್ಬಂದಿ ವರ್ಗದವರ ಅರ್ಜಿಗಳು ಸಂಸ್ಥೆಯ ಪ್ರಾಚಾರ್ಯರಿಂದ ಶಿಫಾರಸ್ಸುಗೊಂಡಿದ್ದರೆ ಮಾತ್ರ ಪರಿಗಣಿಸಲು ಸೂಚಿಸಲಾಗಿದೆ. ಸಿಸಿಟೆಕ್ ಉಪ ಘಟಕಗಳ ಪ್ರಾಚಾರ್ಯರು, ಸಂಸ್ಥೆಯಿಂದ ಪ್ರತಿ ವಿಭಾಗದಿಂದ ಒಬ್ಬರನ್ನು ಮಾತ್ರ ತರಬೇತಿಗೆ ಆಯ್ಕೆ ಮಾಡಿ, ಸಿಬ್ಬಂದಿ ವರ್ಗದವರ ಆಯ್ಕೆ ಪಟ್ಟಿಗೆ ಒಂದು ವಾರ ಮುಂಚಿತವಾಗಿ ನಿರ್ದೇಶನಾಲಯದಿಂದ ಕಡ್ಡಾಯವಾಗಿ ಅನುಮತಿ ಪಡೆಯಬೇಕೆಂದು ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು (ಸಿಡಿಸಿ)

ಇವರಿಗೆ: 1. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್, ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರ ಹಾಗೂ ಅಧಿಕಾರಿ/ಸಿಬ್ಬಂದಿವರ್ಗದವರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂ, ಡಿಟಿಇ ವೆಬ್ ಸೈಟಿನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.